

ನಾರಿಮಣಿಯರಿಗೆ ಇಷ್ಟವಾಗುವ ಕೈಮಗ್ಗದ ಸೀರೆಗಳು

## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ಸಂಗೀತ ಅಂದಕೂಡ್ಲೆ ಥಟ್ ಅಂತ ನೆನಪಾಗೂದು ಯಾರಹೇಳ್ರಿ ನೋಡುಣು? ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಗಾಯಕ ಭಾರತರತ್ನ ಪಂ. ಭೀಮಸೇನ ಗುರುರಾಜ ಜೋಶಿಯವರು. ಇವರ ಹುಟ್ಟೂರು ನಮ್ಮ ಗದಗ ಜಿಲ್ಲೆಗೆ ಸೇರಿದ ರೋಣ ತಾಲೂಕು. ಇವರ ಪೂರ್ವಜರ ಮೂಲ ಗದಗ ತಾಲೂಕಿನ ಹೊಂಬಳ ಗ್ರಾಮ ಅಂತ. ಇಂಥಾ ಶ್ರೇಷ್ಠ ಸಂಗೀತ ವಿದ್ವಾಂಸರನ್ನ ಜಗತ್ತಿಗೆ ಕೊಟ್ಟಿದ್ದು ನಮ್ಮ ಗದಗ ಜಿಲ್ಲೆಗೆ ಬಾಳ ಹೆಮ್ಮೆ ಐತಿ ನೋಡ್ರಿ. ಹಂಗ ಇದು ನಮ್ಮ ಉತ್ತರ ಕರ್ನಾಟಕ ಭಾಗದ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದ ಪ್ರಮುಖ ಕೇಂದ್ರ ಆಗೇತಿ. ಪಂ. ಪುಟ್ಟರಾಜ ಗವಾಯಿಗಳ ಕಾಲಿಗೆ ನಮಿಸಿ, ಮುಂದ ಹೋಗೂನಂತ.

ಗದಗ ಬೆಟಗೇರಿ ಅವಳಿ ನಗರದಾಗ ಸ್ವಾತಂತ್ರ್ಯ ಪೂರ್ವದಿಂದಲೂ ಬಾಳಷ್ಟು ಮುದ್ರಣಾಲಯಗಳು ಅದಾವ. ಅದಕ್ಕ ಇದನ್ನ 'ಮುದ್ರಣಕಾಶಿ' ಅಂತ ಕರಿತಾರ. ಮುದ್ರಣಕಾಶಿಯೊಳಗ ಸಾಹಿತ್ಯದ ರಾಶಿನ ಐತಿ ಅಂದ್ರ ತಪ್ಪ ಆಗಂಗಿಲ್ಲಾ ನೋಡ್ರಿ. ಪಂಚತಂತ್ರ ಕಥೆಗಳನ್ನ ಕೊಟ್ಟ ದುರ್ಗಸಿಂಹ, ಪ್ರಭುಲಿಂಗಲೀಲೆ ಕೃತಿಕಾರ ಚಾಮರಸ, ನಯಸೇನ ಇವ್ರೆಲ್ಲಾ ಇಲ್ಲಿಯವ್ರ; 'ಗದುಗಿನ ಭಾರತ'ವೆಂದೇ ಪ್ರಸಿದ್ಧಿ ಪಡೆದ 'ಕರ್ನಾಟಭಾರತ ಕಥಾಮಂಜರಿ' ರಚಿಸಿದ ಗದುಗಿನಲ್ಲೇ ವಾಸವಾಗಿದ್ದ ಕೋಳಿವಾಡದ ಗದುಗಿನ ನಾರಣಪ್ಪನವರ ಹಿರಿಮೆ ಹೇಳುದಲ್ಲ, ಎಲ್ಲ್ರಿಗೂ ಗೊತ್ತು. ಆಳಕ್ಕಿಳಿದಷ್ಟು ಎತ್ತರಕ್ಕೇರ್ತಾರ. ರೂಪಕ ಸಾಮ್ರಾಜ್ಯದ ಚಕ್ರವರ್ತಿ ಅಂತ ಹೆಸರ ಪಡದಾರ.

ರಾಷ್ಟ್ರಕವಿ ಕುವೆಂಪುರವರು ಸುಮ್ನ ಹೇಳ್ಯಾರನು. 'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು, ಭಾರತ ಕಣ್ಣಲಿ ಕುಣಿಯುವುದು' ಅಂತ. ಇನ್ನು ಉದಯಿಸಿ ನೂರು ವರ್ಷಗಳನ್ನ ಕಂಡ 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು, ಬದುಕು ಬಲುಹಿನ ನಿಧಿಯು ಸದಭಿಮಾನದ ಗೂಡು...' ಎಂದು ಹಾಡಿದ ಹುಯಿಲಗೋಳ ಶ್ರೀ ನಾರಾಯಣರಾಯರು, ಹಾಗೇ 'ಒಂದು ಮುಂಜಾವಿನಲಿ ತುಂತುರಿನ ಸೋನೆ ಮಳೆ... ಗೀತೆಯನ್ನು ಕೊಟ್ಟ 'ಸುನೀತಗಳ ಸಾಮ್ರಾಟ' 'ಚೆಂಬೆಳಕಿನ ಕವಿ' ಎಂದೇ ಪ್ರಸಿದ್ಧಿ ಪಡೆದ ಶ್ರೀ ಚೆನ್ನವೀರ ಕಣವಿಯವರು ಗದಗ ಜಿಲ್ಲೆಯವರಾಗಿದ್ದು, ಗದುಗಿಗೆ ಕಳಶಪ್ರಾಯರು ನೋಡ್ರಿ. ಇವರಷ್ಟ ಅಲ್ಲ ಲಕ್ಕುಂಡಿಯ ವಚನಕಾರ ಅಜಗಣ್ಣ, ಮುಕ್ತಾಯಕ್ಕ, ಕನ್ನಡದ ಕುಲ ಪುರೋಹಿತ ಶ್ರೀ ಆಲೂರ ವೆಂಕಟರಾಯರು, ಶ್ರೀ. ರಂ.ಶ್ರೀ. ಮುಗಳಿಯವರು... ಇನ್ನೂ ಬಾಳ ಜನ ಬಿಡದೇ ಹಿಡಿದ ಜಡಿಮಳಿಯಂಗ ಆವತ್ತಿನಿಂದ ಇವತ್ತಿನವರೆಗೂ ಕನ್ನಡ ಸಾರಸ್ವತ ಲೋಕಕ್ಕ ತಮ್ಮದೇ ಆದ ಕೊಡುಗೆ ನೀಡ್ಯಾರ.

ನಮ್ಮ ಗದಗ್ಯಾಗ ಧಾರ್ಮಿಕ ನೆಲೆಗಟ್ಟಿನ್ಯಾಗ ಸಾಮಾಜಿಕ ಕಳಕಳಿಯುಳ್ಳ ಶರಣ ಸಂಸ್ಕೃತಿಯನ್ನ ಸಾರುವಂತ ಅನೇಕ ಮಠಗೋಳ ಅದಾವ. ಅದ್ರಾಗ ಶ್ರೀ ಮನ್ನಿರಂಜನ ಜಗದ್ಗುರು ತೋಂಟದಾರ್ಯ ಮಠ. ಇಲ್ಲಿ ಲಿಂಗೈಕ್ಯ ಡಾ. ಸಿದ್ದಲಿಂಗ ಸ್ವಾಮೀಜಿಯವರ ತ್ರಿವಿಧ ದಾಸೋಹ ಲೋಕ ಪ್ರಸಿದ್ಧಿ ಪಡದೈತಿ. ಇವರು ಪುಸ್ತಕದ ಮ್ಯಾಲೆ ಬಾಳ ಪ್ರೀತಿ ಇದ್ರಂತ. ಇವರನ್ನ ಪುಸ್ತಕದ ಸ್ವಾಮೀಜಿಗಳು ಅಂತಾನ ಕರಿತಿದ್ರು. ಅವರ ನಂತರ ಡಾ. ಸಿದ್ಧರಾಮ ಸ್ವಾಮೀಜಿಗಳು ನೇತೃತ್ವ ವಹಿಸಿಕೊಂಡಾರ. ಈ ಮಠ ಅನೇಕ ಶಿಕ್ಷಣ ಸಂಸ್ಥೆಗಳನ್ನು ಹೊಂದೈತಿ. ವರ್ಷಕ್ಕೊಮ್ಮೆ ಜಾತ್ರಿ ಭರ್ಜರಿ ಇರತ್ತ. ಅನೇಕ ಕಲಾವಿದರು, ಸಾಹಿತಿಗಳು ಈ ಜಾತ್ರಿಯೊಳಗ ಭಾಗವಹಿಸ್ತಾರ. ಇದಕ್ಕ ಜಾನಪದ ಜಾತ್ರಿ ಅಂತನೂ ಕರೀತಾರ.

> ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ 'ಚೆನ್ನುಡಿ' ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
> ಇಮೇಲ್–
> **editorsu@sudha.co.in**

ಇನ್ನು ವೀರೇಶ್ವರ ಪುಣ್ಯಾಶ್ರಮ ಅಂದ್ರ ಅಂಧರ ಬಾಳಿನ ಬೆಳಕು. ಇದು ಅಂಧ, ಅನಾಥ, ವಿಕಲಚೇತನವುಳ್ಳ ಬಡಮಕ್ಕಳಿಗೆ ಆಶ್ರಯ ನೀಡೈತಿ. ಅನ್ನ, ಅಕ್ಷರ ನೀಡೂದ್ರ ಜೊತೆಗೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಮತ್ತು ಬಹುವಾದ್ಯಗಳ ಜ್ಞಾನಾಮೃತವನ್ನ ನೀಡುವಂತ ಪಾಠಶಾಲೆಯಾಗೇತಿ. ಈ ಮಠಕ್ಕ ಹಾನಗಲ್ ಶ್ರೀ ಕುಮಾರಸ್ವಾಮಿಗಳು, ಶ್ರೀ ಗಾನಯೋಗಿ ಪಂ. ಪಂಚಾಕ್ಷರಿ ಗವಾಯಿ ಮತ್ತು ಪಂ. ಪುಟ್ಟರಾಜ ಗವಾಯಿಯವರ ಆಶೀರ್ವಾದ ಐತಿ. ಇವರ ಆಶೀರ್ವಾದ ಪಡೆದ ಅನೇಕ ಬಡಮಕ್ಕಳು ಸಂಗೀತ ಜ್ಞಾನವನ್ನು ನಾಡಿನೆಲ್ಲೆಡೆ ಹರಡ್ಯಾರ. ಈಗ್ಲೂ ಆ ಮಠಕ್ಕ ಎಷ್ಟೊತ್ತ್ಯಾಗ ಹೋದ್ರು ಸಂಗೀತದ ನಾದ ಬರಮಾಡಿಕೊಳ್ಳತ್ತ. ಕಿವಿಗೋಳು ಜಾಗೃತ ಆಗತಿದ್ದಂಗ ಮನಸ್ಸನ್ನ ಆನಂದದಿಂದ ಭಕುತಿ ಸಾಗರದಲ್ಲಿ ಮುಳುಗಿಸಿಬಿಡುತ್ತ. ಶಾಂತ ಸರೋವರದಲ್ಲಿ ತೇಲಿಸಿ ಬಿಡತ್ತ. ಇಂಥ ಒಂದು ಅದ್ಭುತ ಅನುಭವ ಪಡಕೊಳ್ಳುವಂಥ ಪುಣ್ಯಸ್ಥಳ ನಮ್ಮ ಗದಗ್ಯಾಗ ಇದ್ದಿದ್ದು ನಮ್ಮ ಪುಣ್ಯಾನೋ, ಭಾಗ್ಯಾನೋ ಆಗಿರ್ಬೇಕು. ಇವು ಅಲ್ದ ಶಿವಾನಂದ ಮಠ, ಹಾಳಕೇರಿ ಅನ್ನದಾನೇಶ್ವರ ಮಠ, ಕಪ್ಪತಗಿರಿ ನಂದಿವೇರಿಮಠ, ನೀಲಮ್ಮತಾಯಿ ಮಠ, ಶಿರಹಟ್ಟಿಯ ಫಕೀರೇಶ್ವರ ಮಠ ಮುಂತಾದವು ಶರಣ ಸಂಸ್ಕೃತಿಯನ್ನ ಸಾರತಾವು. ಇವುಕ್ಕೆಲ್ಲ ಒಮ್ಮೆ ಭೇಟಿ ಕೊಡ್ಲೇಬೇಕು.

ಇನ್ನ ಗದಗ ಜಿಲ್ಲೆಯೊಳಗ ಅನೇಕ ಇತಿಹಾಸ ಪ್ರಸಿದ್ಧ ದೇವಾಲಯಗಳು ಅದಾವು. ಅದ್ರಲ್ಲಿ ತ್ರಿಕೂಟೇಶ್ವರ ದೇವಾಲಯ, ವೀರನಾರಾಯಣ ದೇವಾಲಯ ಪ್ರಮುಖ ಅದಾವು. ತ್ರಿಕೂಟೇಶ್ವರ ದೇವಾಲಯ ಮೂರು ಶಿವನಮೂರ್ತಿಗಳನ್ನು ಹೊಂದಿದ ಒಂದು ಶಿವ ದೇವಾಲಯ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಾಣ ಆಗೈತಿ ಅಂತಾರ. ಇದು ಶಿಲ್ಪಕಲಾ ವೈಭವದಿಂದ ಕೂಡಿದ್ದು ನೋಡುಗರನ್ನು ಸೆಳೆಯುವ ದೇವಸ್ಥಾನ ಅನ್ಬಹುದು. ಹಾಗೆ ವೀರನಾರಾಯಣ ದೇವಸ್ಥಾನವನ್ನು ಹೊಯ್ಸಳರ ವಿಷ್ಣುವರ್ಧನ ಕಟ್ಟಿಸಿದ ದೇವಾಲಯ. ಇದ ದೇವಸ್ಥಾನದಲ್ಲಿ ಕುಮಾರವ್ಯಾಸರು ಪ್ರತಿದಿನ ವದ್ದೆ ಬಟ್ಟೆಯಲ್ಲಿ ಕುಳಿತು 'ಗದುಗಿನ ಭಾರತ' ಕಾವ್ಯ ರಚಿಸ್ಯಾರಂತ.

